# ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ
# ಬೆಂಗಳೂರು ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ(ರಿ)
# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

NATIONAL URBAN HEALTH MISSION

*ವಿಶೇಷ ಆಯುಕ್ತರು(ಆರೋಗ್ಯ)ರವರ ಕಛೇರಿ, ಅನೇಕ್ಸ್ ಕಟ್ಟಡ-2, ಮೊದಲನೇ ಮಹಡಿ, ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್ ಚೌಕ, ಬೆಂಗಳೂರು-02.*

ಸಂಖ್ಯೆ: ವಿ.ಆ(ಆ)/ಪಿ.ಆರ್/182/2019-20 ದಿನಾಂಕ: 30-03-2020

## ಕಛೇರಿ ಆದೇಶ

ವಿಷಯ : ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್-19 ರೋಗ ಹರಡದಂತೆ ಶೀಘ್ರ ಪತ್ತೆಗೆ ಸಂಬಂಧಿಸಿದಂತೆ ಹಂತದ ಜ್ವರ ಪ್ರಕರಣಗಳ ತಪಾಸಣಾ ನಡೆಸಲು 2ನೇ ಹಂತದ ನ.ಪ್ರಾ.ಆ.ಕೇಂದ್ರಗಳನ್ನು ಗುರುತಿಸಿರುವ ಬಗ್ಗೆ..

ಉಲ್ಲೇಖ: 1. ದಿನಾಂಕ:24-03-2020ರಂದು ನಡೆದ ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ ರವರ ಅಧ್ಯಕ್ಷತೆಯ ತುರ್ತು ಸಭೆಯಲ್ಲಿ ಸೂಚಿಸಿರುವಂತೆ.

2. ದಿನಾಂಕ: 30.03. 2020ರಂದು ರಾಜ್ಯ ನೋಡೆಲ್ ಅಧಿಕಾರಿಗಳು, ಎನ್.ಹೆಚ್.ಎಂ ರವರ ಅಧ್ಯಕ್ಷತೆಯಲ್ಲಿ ನಡೆದ ತುರ್ತು ಸಭೆಯ ತೀರ್ಮಾನದಂತೆ.

***

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂದಿಸಿದಂತೆ, ರಾಜ್ಯದಲ್ಲಿ ಕೋವಿಡ್-19. ರೋಗವು ಪಸರಿಸುತ್ತಿರುವ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಎಲ್ಲಾ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ಸಾರ್ವಜನಿಕ ಆಸ್ಪತ್ರೆಗಳಲ್ಲಿ ಎಲ್ಲಾ ಜ್ವರ ಪ್ರಕರಣಗಳನ್ನು ತಪಾಸಣೆ, ಶೀಘ್ರ ಪತ್ತೆ, ರೆಫರಲ್ ಸೇವೆ ಹಾಗೂ ಸೂಕ್ತ ಚಿಕಿತ್ಸೆ ನೀಡುವ ಅವಶ್ಯಕತೆ ಇರುತ್ತದೆ.

ಕೋವಿಡ್-19 ರೋಗವು ಬಹುಮುಖವಾಗಿ ಜ್ವರ, ಕೆಮ್ಮು, ಉಸಿರಾಟದ ತೊಂದರೆ, ಅತಿಸಾರ ಬೇದಿ ಮುಖಾಂತರ ಕಾಣಿಸಿಕೊಳ್ಳುತ್ತಿದ್ದು, ಇದರಲ್ಲಿ ಹೆಚ್ಚಾಗಿ ಜ್ವರ ಪ್ರಕರಣಗಳು ದಾಖಲಾಗುತ್ತಿದೆ, ಈ ಹಿನ್ನಲೆಯಲ್ಲಿ ಮುಂಜಾಗೃತ ಕ್ರಮವಾಗಿ ಜ್ವರ ಪ್ರಕರಣಗಳನ್ನು ಶೀಘ್ರ ಪತ್ತೆ ಹಚ್ಚುವ ಸಲುವಾಗಿ ಈಗಾಗಲೇ 01ನೇ ಹಂತದಲ್ಲಿ 31 ನಗರ ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರ/ಸಾರ್ವಜನಿಕ ಆಸ್ಪತ್ರೆಗಳನ್ನು ಗುರುತಿಸಲಾಗಿದ್ದು, ಮುಂದುವರೆದಂತೆ 2ನೇ ಹಂತದಲ್ಲಿ 29 ನಗರ ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರ/ಸಾರ್ವಜನಿಕ ಆಸ್ಪತ್ರೆಗಳನ್ನು ಗುರುತಿಸಿ ಒಟ್ಟು 60 ಜ್ವರ ತಪಾಸಣಾ ಕ್ಲಿನಿಕ್‌ಗಳು ಕಾರ್ಯವಹಿಸಲು ಕ್ರಮವಹಿಸಲಾಗಿದ್ದು, ಅದರಂತೆ 02ನೇ ಹಂತದಲ್ಲಿ ಆಯ್ಕೆಯಾಗಿರುವ ಆರೋಗ್ಯ ಕೇಂದ್ರಗಳಿಗೆ ಬರುವ ರೋಗಿಗಳನ್ನು ಜ್ವರ ತಪಾಸಣೆಗೆ ಒಳಪಡಿಸುವುದು ಮತ್ತು ಈ ಕೆಳಕಂಡ ಮಾನದಂಡಗಳನ್ವಯ ಕ್ರಮವಹಿಸುವುದು.

1. ವಾರದ ಎಲ್ಲಾ ದಿನಗಳು (ಸರ್ಕಾರಿ ರಜೆಗಳನ್ನು ಒಳಗೊಂಡಂತೆ) ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 4.30 ವರೆವಿಗೂ ಜ್ವರ ತಪಾಸಣಾ ಶಿಬಿರಗಳನ್ನು ನಡೆಸುವುದು
2. ಆರೋಗ್ಯ ಸಂಸ್ಥೆಯ ಹೊರಾಂಗಣದಲ್ಲಿ/ತೆರೆದ ಸ್ಥಳದಲ್ಲಿ/ ಪತ್ಯೇಕ ಕೊಠಡಿಯಲ್ಲಿ ಜ್ವರ ತಪಾಸಣಾ ಶಿಬಿರಗಳನ್ನು ನಡೆಸುವುದು.
3. ಜ್ವರ ತಪಾಸಣಾ ಶಿಬಿರಗಳನ್ನು ನಡೆಸಲು ಅವಶ್ಯ ಆರೋಗ್ಯ ಸಲಕರಣೆಗಳನ್ನು, ಸುರಕ್ಷಾ ಕವಚಗಳನ್ನು ಇತರೆ ಜ್ವರ ತಪಾಸಣಾ ಶಿಬಿರಗಳಲ್ಲಿ ಲಭ್ಯವಿರತಕ್ಕದ್ದು.
4. ಜ್ವರ ತಪಾಸಣಾ ಶಿಬಿರಗಳಿಗೆ ವೈದ್ಯಾಧಿಕಾರಿಗಳು ಹಾಗೂ ಶುಶ್ರೂಷಕಿ/ಹಿರಿಯ/ಕಿರಿಯ ಮಹಿಳಾ/ಪುರುಷ ಆರೋಗ್ಯ ಸಹಾಯಕರವರುಗಳನ್ನು ಒಳಗೊಂಡಂತೆ ತಂಡ ರಚಿಸಿಕೊಳ್ಳತಕ್ಕದ್ದು.
5. ಒಳ ಬರುವ ರೋಗಿಗಳು ಹಾಗೂ ಆರೋಗ್ಯ ಸಿಬ್ಬಂದಿಗಳಲ್ಲಿ ಕನಿಷ್ಠ 01 ಮೀಟರ್ ಅಂತರ ಇರುವುದನ್ನು ಖಚಿತಪಡಿಸುವುದು.
6. ಜ್ವರ ಪ್ರಕರಣಗಳನ್ನು ತಪಾಸಣೆ ನಡೆಸಿ ಕೋವಿಡ್-19 ರೋಗ ಲಕ್ಷಣಗಳು ಕಂಡು ಬಂದಲ್ಲಿ ಸುರಕ್ಷಾ ಕ್ರಮಗಳನ್ನು ವಹಿಸಿ ಮೇಲ್ದರ್ಜೇ ಆಸ್ಪತ್ರೆಗೆ ಸೂಕ್ತ ರೆಫರಲ್ ಮಾಡಿ ಸಂಬಂದಪಟ್ಟ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿಗಳಿಗೆ ಮಾಹಿತಿ ನೀಡುವುದು.

Scanned with CamScanner

7. ರೋಗಿಯು ಉಪಯೋಗಿಸಿದ ಮಾಸ್ಕ್, ಗ್ಲೌಸ್‌ಗಳನ್ನು ಎಚ್ಚರಿಕೆಯಿಂದ ಜೈವಿಕ ತಾಜ್ಯ ನಿರ್ವಹಣಿ ಕಾಯ್ದೆ ಅನ್ವಯ ವಿಲೇವಾರಿ ಮಾಡುವುದು.
8. ಜ್ವರ ತಪಾಸಣಾ ವರದಿಗಳನ್ನು ಕ್ರೋಢೀಕರಿಸಿ ತಾಲ್ಲೂಕು ಆರೋಗ್ಯಾಧಿಕಾರಿಗಳ/ವಲಯ ಆರೋಗ್ಯಾಧಿಕಾರಿಗಳು, ಬಿಬಿಎಂಪಿರವರ ಮುಖಾಂತರ ನಗರ ಯೋಜನಾ ನಿರ್ವಹಣಾಧಿಕಾರಿಗಳಿಗೆ ಇ-ಮೇಲ್ ಮುಖಾಂತರ (feverclinicbbmp@gmail.com) ಪ್ರತಿದಿನ ಸಂಜೆ 5.00 ಗಂಟೆಗೆ ಸಲ್ಲಿಸುವುದು.
9. ನಗರ ಯೋಜನಾ ನಿರ್ವಹಣಾಧಿಕಾರಿಗಳು, ಎನ್.ಯು.ಹೆಚ್.ಎಂ ರವರು ಪ್ರತಿದಿನ ಸಂಜೆ 7.00 ಗಂಟೆಯೊಳಗಾಗಿ ಕ್ರೋಢೀಕರಿಸಿದ ವರದಿಯನ್ನು ಇ-ಮೇಲ್ ಮುಖಾಂತರ (ssuidspbangalore@gmail.com) ಸಲ್ಲಿಸುವುದು.

ಜ್ವರ ತಪಾಸಣಾ ವರದಿಗಳನ್ನು ಬಿಬಿಎಂಪಿ ವ್ಯಾಪ್ತಿಯ 02ನೇ ಹಂತದಲ್ಲಿ ಆಯ್ಕೆಯಾಗಿರುವ (ಪಟ್ಟಿಯಲ್ಲಿ ಲಗತ್ತಿಸಿರುವ) ಆರೋಗ್ಯ ಕೇಂದ್ರಗಳಲ್ಲಿ ಕಡ್ಡಾಯವಾಗಿ ಎಲ್ಲಾ ದಿನಗಳು (ಸರ್ಕಾರಿ ರಜೆ ದಿನಗಳನ್ನು ಒಳಗೊಂಡಂತೆ) ನಡೆಸತಕ್ಕದ್ದು ಹಾಗೂ ಸೂಕ್ತ ಸಮಯಕ್ಕೆ ವರದಿಗಳನ್ನು ನಿರ್ದೇಶನಾಲಯದ (feverclinicbbmp@gmail.com) ಸಲ್ಲಿಸುವುದು ತಪ್ಪಿದಲ್ಲಿ ಸಂಬಂಧಪಟ್ಟ ವೈದ್ಯಾಧಿಕಾರಿಗಳನ್ನೇ ನೇರ ಹೊಣೆಗಾರಿಕೆಯನ್ನಾಗಿ ಮಾಡಿ ಶಿಸ್ತು ಕ್ರಮ ಜರುಗಿಸಲಾಗುವುದು. ನಗರ ಯೋಜನಾ ನಿರ್ವಹಣಾಧಿಕಾರಿರವರನ್ನು ನೋಡಲ್ ಅಧಿಕಾರಿಯಾಗಿ ನೇಮಿಸಿ ಮೇಲ್ವಿಚಾರಣೆ ಹಾಗೂ ವರದಿಯನ್ನು ಸಲ್ಲಿಸಲು ಸೂಚಿಸಿದೆ.

(ವರದಿಯ ನಮೂನೆಗಳನ್ನು, ರೆಫರಲ್ ರಸೀದಿಗಳನ್ನು ~~ಮತ್ತು ಕ್ಲಿನಿಕಲ್ ಪ್ರೋಟೋಕಾಲ್~~ ಈ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿದೆ,)

ವಿಶೇಷ ಆಯುಕ್ತರು(ಆರೋಗ್ಯ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:**

1. ಮುಖ್ಯ ಆರೋಗ್ಯಾಧಿಕಾರಿಗಳು(ಕ್ಲಿನಿಕಲ್)ರವರ ಸೂಕ್ತ ಕ್ರಮಕ್ಕಾಗಿ
2. ಮುಖ್ಯ ಆರೋಗ್ಯಾಧಿಕಾರಿಗಳು(ಸಾ.ಆ)ರವರ ಸೂಕ್ತ ಕ್ರಮಕ್ಕಾಗಿ
3. ಜಿಲ್ಲಾ ಆ.ಕು.ಕ.ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಸೂಕ್ತ ಕ್ರಮಕ್ಕಾಗಿ
4. ಆರೋಗ್ಯಾಧಿಕಾರಿಗಳು(ಪೂರ್ವ, ಪಶ್ಚಿಮ, ದಕ್ಷಿಣ)
5. ಸಂಬಂಧಪಟ್ಟ ವೈದ್ಯಾಧಿಕಾರಿಗಳು, ನ.ಪ್ರಾ.ಆ.ಕೇಂದ್ರಗಳು, ಬಿಬಿಎಂಪಿ/ ರೆಫರಲ್/ಸಾರ್ವಜನಿಕ ಆಸ್ಪತ್ರೆ ಬಿಬಿಎಂಪಿ/ಬೆಂಗಳೂರು ನಗರ ಜಿಲ್ಲೆ ರವರ ಸೂಕ್ತಕ್ರಮಕ್ಕಾಗಿ
6. ನಗರ ಯೋಜನಾ ನಿರ್ವಹಣಾಧಿಕಾರಿಗಳು, ಎನ್.ಯು.ಹೆಚ್.ಎಂ ಸೂಕ್ತಕ್ರಮಕ್ಕಾಗಿ

**ಪ್ರತಿಯನ್ನು ಗೌರವ ಪೂರ್ವಕ ಮಾಹಿತಿಗಾಗಿ ಸಲ್ಲಿಸಿದೆ.**

1. ಪೂಜ್ಯ ಮಹಾಪೌರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಅಪ್ತಶಾಖೆಯ ಮೂಲಕ ಸಲ್ಲಿಸಿದೆ.
2. ಉಪ-ಮಹಾಪೌರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಅಪ್ತಶಾಖೆಯ ಮೂಲಕ ಸಲ್ಲಿಸಿದೆ.
3. ಅಧ್ಯಕ್ಷರು, ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.
5. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಅಪ್ತಶಾಖೆಯ ಮೂಲಕ ಸಲ್ಲಿಸಿದೆ.
6. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ ರವರ ಅವಗಾಹನೆಗೆ ತರಲು ಅಪ್ತಶಾಖೆಯ ಮೂಲಕ ಸಲ್ಲಿಸಿದೆ.
7. ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
8. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
9. ಯೋಜನಾ ನಿರ್ದೇಶಕರು, (ಆರ್.ಸಿ.ಹೆಚ್. ಮತ್ತು ಐ.ಡಿ.ಎಸ್.ಪಿ.), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
10. ಕಛೇರಿ ಪ್ರತಿ.

Scanned with CamScanner